ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿನಾಂಕಃ 10-02-2020.

**ಪಾಟೀಸವಾಲು :– ಶ್ರೀ ಎಸ್.ಎನ್., ವಕೀಲರಿಂದ ಪ್ರತಿವಾದಿ ಪರವಾಗಿ**

ದಾವಾಸ್ತಿಯ ಸರ್ವೆನಂಬರ್ 14. ಸದರಿ ಸರ್ವೆನಂಬರ್ ನಲ್ಲಿ ಒಟ್ಟು ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು 13 ಗುಂಟೆ ಆಸ್ತಿಗಳು ನನ್ನ ತಂದೆ ಖರೀದಿ ಮಾಡಿದ್ದು, ಸದರಿ ಆಸ್ತಿ ನಮಗೆ ಸೇರಿರುತ್ತದೆ ಎಂದು ದಾವೆಯನ್ನು ಹೂಡಿರುತ್ತೇನೆ. 1981 ನೇ ಸಾಲಿನಲ್ಲಿ ನನ್ನ ತಂದೆಯವರು ದಾವಾಸ್ತಿಯನ್ನು ಸಿಂಗಮ್ಮ ರವರಿಂದ ಖರೀದಿ ಮಾಡಿರುತ್ತಾರೆ. ಸದರಿ ಸಿಂಗಮ್ಮ ದಾವಾಸ್ತಿಯನ್ನು ಯಾರಿಂದ ಮತ್ತು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಹೂಡುವ ಮೊದಲು ಆಸ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಿ ನಮ್ಮ ವಕೀಲರಿಗೆ ನೀಡಿರುತ್ತೇನೆ. ನನ್ನ ತಂದೆ ಖರೀದಿ ಮಾಡಿದ ನಂತರ ಖಾತೆ ಬದಲಾವಣೆಯಾಗಿರುವುದಿಲ್ಲ. ದಾವಾಸ್ತಿಯ ಉತ್ತರಕ್ಕೆ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ನನ್ನ ತಂದೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸುಮಾರು 5-6 ವರ್ಷಗಳಿಂದ ನನಗೆ ಜಮೀನುಗಳ ಬಗ್ಗೆ ನಡವಳಿಕೆಗಳ ಬಗ್ಗೆ ಗೊತ್ತಾಗಿರುತ್ತದೆ. ದಾವಾಸ್ತಿಗೆ 1981 ನೇ ಸಾಲಿನಿಂದಲೂ ಈವರೆವಿಗೂ ಯಾವುದೇ ಕಂದಾಯ ಪಾವತಿ ಮಾಡಿರುವುದಿಲ್ಲ. ಯಾವುದೇ ಒಬ್ಬ ವ್ಯಕ್ತಿ ಜಮೀನಿನ ಸ್ವಾಧೀನದಲ್ಲಿದ್ದರೆ ಸದರಿ ಜಮೀನಿಗೆ ಕಂದಾಯ ಪಾವತಿ ಮಾಡಿಕೊಂಡು ಬರುತ್ತಾರೆ ಎಂದರೆ ಸಾಕ್ಷಿಯು ದಾವಾಸ್ತಿಯ ಬಗ್ಗೆ ನಮಗೆ ಈಗೆ ಮೂರು ವರ್ಷಗಳಿಂದ ದಾಖಲಾತಿ ದೊರಕಿರುತ್ತದೆ ಎಂದು ನುಡಿದಿರುತ್ತಾರೆ. ಮೂರು ವರ್ಷಗಳಿಂದ ದಾವಾಸ್ತಿಗೆ ಕಂದಾಯ ಪಾವತಿ ಮಾಡಿರುವುದಿಲ್ಲ.

ದಾವಾಸ್ತಿಯಲ್ಲಿ ನಾನು ಯಾವಾಗಲೂ ಸ್ವಾಧೀನದಲ್ಲಿ ಇಲ್ಲದ ಕಾರಣ ಸಂಬಂಧಪಟ್ಟ ದಾಖಲಾತಿಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಖಾತೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ದಾವಾಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ - ಪುಟ್ಟರಾರಾಜುರವರ ಜಮೀನು, ಪಶ್ಚಿಮಕ್ಕೆ - ಕುಮಾರ ರವರ ಜಮೀನು, ಉತ್ತರಕ್ಕೆ - ನಂಜಣ್ಣನವರ ಜಮೀನು, ದಕ್ಷಿಣಕ್ಕೆ - ನಮಗೆ ಸೇರಿದ ಆಸ್ತಿ ಇರುತ್ತದೆ. ಸದರಿ ಚೆಕ್ಕುಬಂದಿಯ ಮಧ್ಯದಲ್ಲಿ ದಾವಾಸ್ತಿ ಇರುತ್ತದೆ ಎಂದರೆ ಸರಿ. ದಾವೆಯನ್ನು ಹೂಡುವ ಸಂದರ್ಭದಲ್ಲಿ ನಮ್ಮ ವಕೀಲರಿಗೆ ದಾವಾಸ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ - ಚೆನ್ನಸ್ವಾಮಿ ಮತ್ತು ರಾಮೇಗೌಡರ ಜಮೀನು, ಪಶ್ಚಿಮಕ್ಕೆ - ಸರ್ಕಾರಿ ಗೋಮಾಳ, ಉತ್ತರಕ್ಕೆ - ನಮ್ಮ ಜಮೀನು, ದಕ್ಷಿಣಕ್ಕೆ - ಹೊಸೂರು - ಶಿವಪುರ ರಸ್ತೆ ಎಂದು ಹೇಳಿ ಬರೆಸಿರುತ್ತೇನೇ ಆದರೆ ನೆನಪಿರುವುದಿಲ್ಲ.

*ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.*

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.